| | | | |
|---|---|---|---|
| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
| ಸಿಸಿ ನಂ. 604/2020 | | | |
| ಸಾಕ್ಷಿದಾರರ ಹೆಸರು | ಜಿ.ಸಿ ನಾರಾಯಣಸ್ವಾಮಿ | | |
| ತಂದೆ ಹೆಸರು | ಚಿನ್ನಪ್ಪಯ್ಯ | ಪಿಡಬ್ಲ್ಯೂ | 6 |
| ವಯಸ್ಸು | 44 ವರ್ಷ | ಸಿಡಬ್ಲ್ಯೂ | 9 |
| ಉದ್ಯೋಗ | ಪೋ. ಇನ್ಸ್ ಪೆಕ್ಟರ್ | ಪ್ರಮಾಣ ವಚನ | |
| ವಾಸ ಸ್ಥಳ | ಶ್ರೀನಿವಾಸಪುರ | ಭೋದಿಸಿದ ದಿನಾಂಕ | 20-07-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನಾನು 28-10-18 ರಿಂದ 29-02-2020 ರವರೆಗೆ ಪಿ ಐ ಆಗಿ ಚಿಂತಾಮಣಿ ನಗರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13-10-2019 ಪರಕಣ ಕಡತವನ್ನು ಮುಂದಿನ ತನಿಖೆಗಾಗಿ ಚಾಸ 6 ರವರಿಂದ ಪಡೆದುಕೊಂಡು ಪರಿಶೀಲಿಸಿ, ಠಾಣೆಯಲ್ಲಿ ಇದ್ದ ಆರೋಪಿ ಇಬ್ರಾಹಿಂ ಖಾನ್ ರವರನ್ನು ಅಂಗ ಶೋಧನೆಗಾಗಿ ಗೆಜೆಟೆಡ್ ಅಧಿಕಾರಿಗಳಾದ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತೇನೆ. ಮನವಿ ಮೇರೆಗೆ ವೈದ್ಯರಾದ ಸಂತೋಷ್ ಕುಮಾರ್ ಚಾಸ-3 ರವರನ್ನು ಹಾಗೂ ಪಂಚರಾದ ಚಾಸ-4, 5 ರವರನ್ನು ಬರಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸ-3 ರಿಂದ 5 ರವರ ಸಮಕ್ಷಮ ಆರೋಪಿಯ ಅಂಗ ಶೋಧನೆ ಮಾಡಿಸಿ , ಆರೋಪಿ ಬಳಿ ಇದ್ದ ಎರಡು ಗಾಂಜಾ ಪ್ಯಾಕೇಟ್ ಗಳನ್ನು ಆರೋಪಿ ತೆಗೆದುಕೊಟ್ಟಿದ್ದು ಸದರಿ ಗಾಂಜಾ ಪ್ಯಾಕೇಟ್ ಗಳನ್ನು ತೂಕ ಮಾಡಲಾಗಿ ಪ್ರತಿಯೊಂದು ಪ್ಯಾಕೇಟ್ 10 ಗ್ರಾಂ ಇದ್ದು ಪಂಚರ ಸಮಕ್ಷಮ ಅಮಾತನ್ ಪಡಿಸಿಕೊಂಡು, ಸದರಿ ಮಾಲನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಲೇಬಲ್ ಅಂಟಿಸಿ ನಮ್ಮ ಠಾಣಾ ಪಿ ಎಫ್ ನಂ.219/19 ರಂತೆ ನಮೂದಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪಿ ಎಫ್ ಬರಾಯಿಸಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು 8-30 ರಿಂದ 9-10 ಗಂಟೆಯವರೆಗೆ

ಜರುಗಿಸಿರುತ್ತೇನೆ. ನಂತರ ಆರೋಪಿಯನ್ನು ವಿಚಾರಣೆ ಮಾಡಿ ಸ್ವ ಇಚ್ಚಾ ಹೇಳಿಕೆ ಪಡೆದುಕೊಂಡಿರುತ್ತೇನೆ ಬಂಧನದಲ್ಲಿ ಇಟ್ಟಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸ- 2 ರಿಂದ 5 ರವರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ14-10-19 ರಂದು ದಸ್ತಗಿರಿ ಮಾಡಿದ ಆರೋಪಿಯನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಬೆಂಗಾವಲಿನೊಂದಿದಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ19-12-19 ರಂದು ಮಾನ್ಯ ನ್ಯಾಯಾಲಯದ ಅನುಮತಿಯಂತೆ ನ್ಯಾಯಾಧೀಶರ ಮತ್ತು ಪಂಚರ ಸಮಕ್ಷಮ ಈ ಕೇಸಿನಲ್ಲಿ ಅಮಾನತ್ ಪಡಿಸಿಕೊಂಡ ಗಾಂಜಾ ಪ್ಯಾಕೇಟ್ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಇನ್ ವೆಂಟ್ರಿ ಮಾಡಿಸಿರುತ್ತೇನೆ. ಮಾನ್ಯ ನ್ಯಾಯಾಧೀಶರ ಸಮಕ್ಷಮ 10 ಗ್ರಾಂ 80 ಗ್ರಾಂ ಗಾಂಜಾವನ್ನು ಎಫ್ ಎಸ್ ಎಲ್ ವರದಿಗಾಗಿ ಅಮಾತನ್ ಪಡಿಸಿಕೊಂಡು ನಮ್ಮ ಠಾಣಾ ಪಿ ಎಫ್ ನಂ.268/19 ರಲ್ಲಿ ನಮೂದಿಸಿ ನಂತರ ದಿಃ27-12-2019 ರಂದು ನಮ್ಮ ಸಿಬ್ಬಂದಿಯವರಾದ ಪಿ ಸಿ ಗಣೇಶ್ ರವರ ಮೂಲಕ ಎಪ್ ಎಸ್ ಎಲ್ ಗೆ ಕಳುಹಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ದಿಃ22-1-20 ರಂದು ಎಪ್ ಎಸ್ ಎಲ್ ವರದಿಯನ್ನು ಬಾಕಿ ಉಳಿಸಿ ತನಿಖೆಯು ಪೂರ್ತಿಗೊಡಿದ್ದು ಆರೋಪಿತರು ಮೇಲೆ ಸಾಕಷ್ಟು ಸಾಕ್ಷ್ಯದಾರಗಳು ಇದುದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನಿಪಿ 2 ಮಾಲು ಅಮಾನತ್ ಪಂಚನಾಮೆಯಲ್ಲಿನ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 (ಸಿ) ಎಂದು, ದಿಃ13-10-19 ರಂದು 41 ಎಡ್ ಡಿ ಪಿ ಎಸ್ ಕಾಯ್ದೆ ಯಡಿ ನೀಡಿರುವ ನೋಟೀಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 6 ಎಂದು ಅದರ ಮೇಲಿರುವ ಸಹಿಯನ್ನು ನಿಪಿ 6 (ಎ) ಎಂದು, ದಿಃ13-10-19 ರಂದು ಚಾಸ-3 ರವರಿಗೆ ನೀಡಿದ ಮನವಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಅದರ ಮೇಲಿರುವ ಸಹಿಯನ್ನು ನಿಪಿ 7 (ಎ) ಎಂದು, ದಿಃ27-12-19 ರಂದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಸ್ವೀಕೃತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು

ನಿಪಿ 8 ಎಂದು ಅದರ ಮೇಲಿರುವ ಸಹಿಯನ್ನು ನಿಪಿ 8 (ಎ) ಎಂದು, ಇನ್ ವೆಂಟ್ರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಅದರ ಮೇಲಿರುವ ಸಹಿಯನ್ನು ನಿಪಿ9 (ಎ) ಎಂದು ಗುರುತಿಸಲಾಯಿತು. ಮು. ಮಾ-1 ರ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು. ಮಾ-1 (ಎ) ಎಂದು ಗುರುತಿಸಲಾಯಿತು. ಗೈರು ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ವೈ ಕೆ ಆರ್ ವಕೀಲರಿಂದ

ವೈದ್ಯಾಧಿಕಾರಿಗಳಿಗೆ ನೀವು ಯಾವುದೇ ರೀತಿಯ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಾಧಿಕಾರಿಗಳು ಠಾಣೆಗೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ನೀವು ಯಾವುದೇ ಮಾಲನ್ನು ಅಮಾನತ್ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಗಾಂಜಾ ಅನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿಯಿಂದ ಸ್ವಾ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸ-1 ರವರು ನಿಮ್ಮ ಸಿಬ್ಬಂದಿಯವರು ಎಂದರೆ ಸರಿ. ನಿಮ್ಮ ಸಿಬ್ಬಂದಿ ಮತ್ತು ನೀವು ಸೇರಿ ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ದೋಷಾರೋಪಣಾ ಪಟ್ಟಿಯಲ್ಲಿ ಹೇಳಿದ ರೀತಿಯಲ್ಲಿ ಯಾವುದೇ ತಪ್ಪನ್ನು ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣೆಯ ಅಂಕಿ ಅಂಶಕ್ಕಾಗಿ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಆರೋಪಿಗೆ ತೊಂದರೆ ನೀಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.